

# ಕೌಶಲಕ್ಕೆ ಅವಕಾಶ

ತನ್ಮಯ್ ಗುರುರಾಜ್




**ಯುವಮನಸ್ಸುಗಳ ಮನಗೆದ್ದ ತನ್ಮಯ್ ಗುರುರಾಜ್ ಇಂಡೀ ಸಂಗೀತದ ಬಗ್ಗೆ ಹೀಗೆ ಹೇಳುತ್ತಾರೆ...**

‘ಇಲ್ಲಿ ನಮ್ಮ ಕೌಶಲಕ್ಕೆ ಸಾಕಷ್ಟು ಅವಕಾಶವಿದೆ. ವ್ಯಾಪ್ತಿ ವಿಶಾಲವಾಗಿದೆ. ನಮ್ಮ ಮನೋಧರ್ಮದ ಅಭಿವ್ಯಕ್ತಿಯನ್ನು ಯಾವ ಕಟ್ಟುಪಾಡುಗಳಿಗೆ ಒಳಗಾಗದೆ, ಶಾಸ್ತ್ರೀಯತೆಯ ಚೌಕಟ್ಟಿನೊಳಗೆ ಸೇರಿಕೊಳ್ಳದೆ ನಮಗೆ ಬೇಕಾದ ಹಾಗೆ ಸಂಗೀತ ರಚನೆ ಮಾಡಿ ಹಾಡಬಹುದು, ಯಾರೆಲ್ಲ ಸ್ವತಂತ್ರವಾಗಿ ಹಾಡಬೇಕು ಅಂತ ಅಂದುಕೊಳ್ಳುತ್ತಾರೋ ಅವರಿಗೆಲ್ಲ ಇದೊಂದು ಸೂಕ್ತ ವೇದಿಕೆ. ಇದನ್ನು ಯುವಪೀಳಿಗೆಯವರು ಬಹಳ ಇಷ್ಟಪಡುತ್ತಾರೆ. ಬೇರೆ ಸಂಗೀತಗಳಲ್ಲಿ ತಬಲಾ, ಡ್ರಮ್ಸ್ ಬಳಕೆ ಇರುತ್ತದೆ. ಆದರೆ ಇದರಲ್ಲಿ ಸಣ್ಣ ಸಣ್ಣ ಸೌಂಡ್ ಇಟ್ಕೊಂಡು ಸಂಗೀತ ಮಾಡಬಹುದು. ಇದಕ್ಕೆ ನಿರ್ದಿಷ್ಟ ಚೌಕಟ್ಟು ಇರೋದಿಲ್ಲ. ನಮ್ಮ ಮನಸ್ಸಿಗೆ ಏನನಿಸುತ್ತೋ ಅದನ್ನು ಸ್ವತಂತ್ರವಾಗಿ ಹಾಡಬಹುದು. ಹಿಂದಿಯಲ್ಲಿ ಇಂಡೀ ಸಂಗೀತ ತುಂಬ ಇದೆ. ಕನ್ನಡದಲ್ಲಿ ಸ್ವತಂತ್ರ ಸಂಗೀತಗಾರರು ಕಡಿಮೆ ಇದ್ದಾರೆ. ಹಿಂದಿಯಂತೆ ಕನ್ನಡದಲ್ಲೂ ಆಗಬೇಕು. ನನ್ನ ಕ್ರಿಯಾಶೀಲತೆಯನ್ನು ಬಳಸಿ ಕನ್ನಡ ಸಂಗೀತವನ್ನು ಮುಂದೆ ಕೊಂಡೋಗಬೇಕು ಅನ್ನೋದು ನನ್ನ ಗುರಿ.’



ಈ ಕನಸು ಕಂಗಳ ಹುಡುಗ ಇಂಡೀಯಲ್ಲಿ ಇಷ್ಟೊಂದು ಆಸಕ್ತಿ ತಳೆದದ್ದು ಹೇಗೆ? ಉತ್ತರ ಅವರ ಮಾತುಗಳಲ್ಲೇ ಕೇಳೋಣ.

‘ನಾನು ಮೂಲತಃ ಬೆಂಗಳೂರಿನವ. ಪಿಇಎಸ್ ಕಾಲೇಜಿನಲ್ಲಿ ನಾಲ್ಕನೇ ವರ್ಷದ ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ ವಿದ್ಯಾರ್ಥಿ. ಆರನೇ ವಯಸ್ಸಿನಲ್ಲೇ ಸಂಗೀತದ ಹುಚ್ಚು ಬೆಳೆಸಿಕೊಂಡೆ. ತಬಲಾ ವಾದನವನ್ನು ಗುರು ಹರ್ಷ ಅವರ ಬಳಿ ಕಲಿತೆ. ಬಳಿಕ ಹಾಡೋದನ್ನು ಅಭ್ಯಾಸ ಮಾಡಿದೆ. ಕೀಬೋರ್ಡ್ ನುಡಿಸುವ ಹವ್ಯಾಸವನ್ನೂ ಬೆಳೆಸಿಕೊಂಡೆ. ಅದು ಕೋವಿಡ್ ಕಾಲ. 2020ರಲ್ಲಿ ನನ್ನದೇ ಆದ ಹೊಸ ಬಗೆಯ ಸಂಗೀತದತ್ತ ಪ್ರಯೋಗ ಆರಂಭಿಸಿದೆ. ಹಾಡುಗಳನ್ನು ಕೇಳಿ ನನ್ನದೇ ಟ್ರ್ಯಾಕ್‌ನಲ್ಲಿ ಸಂಗೀತ ಸಂಯೋಜನೆ ಮಾಡಿ ಅದನ್ನು ಕಿರುಚಿತ್ರಗಳಿಗೆ ಬಳಸಿದೆ. ಹೀಗೆ ನನ್ನ ಆಸಕ್ತಿ ಇಂಡೀ ಸಂಗೀತದತ್ತ ಹೊರಳಿತು. ಜನವರಿ 8 2026ರಂದು ‘ನಿನ್ನ ನೋಟವು’ ಇಂಡೀ ಆಲ್ಬಂ ಬಿಡುಗಡೆಗೊಂಡದ್ದೇ ತಡ, ಜೆನ್‌ಝೀ ಕೇಳುಗರನ್ನು ಬಹಳ ಸೆಳೆಯಿತು. 1.5 ಮಿಲಿಯನ್ ಸ್ಪಾಟಿಫೈ ಹಾಗೂ ಮೂರು ಮಿಲಿಯನ್ ಕೇಳುಗರು ಬೇರೆ ಬೇರೆ ಪ್ಲಾಟ್‌ಫಾರ್ಮ್‌ನಲ್ಲಿ ಈ ಹಾಡನ್ನು ವೀಕ್ಷಿಸಿದ್ದು ನನ್ನ ಸೌಭಾಗ್ಯ. ಸದ್ಯ ಪಾಪ್ ಸಂಗೀತದತ್ತ ಒಲವಿದೆ. ಸಂಗೀತದಲ್ಲಿ ಹೊಸ ಪ್ರಯೋಗಗಳನ್ನು ಮಾಡುವತ್ತ ಚಿತ್ತ ನೆಟ್ಟಿದ್ದೇನೆ’.



## ‘ಇಂಡೀ’ಯಲ್ಲಿ ಮಲೆನಾಡ ವೈಭವ!

ಮಲೆನಾಡಿನ ಮಳೆಗಾಲದ ಚಿತ್ರಣ ಕಣ್ಣಿಗೆ ಕಟ್ಟುತ್ತದೆ. ಸುತ್ತ ದಟ್ಟ ಹಸಿರು, ನಿರಂತರ ಜಡಿಮಳೆ, ಜಲಪಾತಗಳ ಅಬ್ಬರ ಮತ್ತು ಮಂಜಿನಿಂದ ಆವೃತವಾದ ಬೆಟ್ಟಗಳ ಅದ್ಭುತ ದೃಶ್ಯ ನಯನಮನೋಹರ. ಪ್ರಕೃತಿಯು ಮೈದುಂಬಿ ನರ್ತಿಸುವ ಈ ಸಮಯದಲ್ಲಿ, ಕೆಂಪು ಮಣ್ಣಿನ ಹಾದಿಗಳು, ಅಣಬೆಗಳ ಅರಳುವಿಕೆ, ಕಳಲೆ ಮತ್ತು ಮೀನಿನ ವಿಶೇಷ ಅಡುಗೆಗಳು ಮಲೆನಾಡಿನ ಬದುಕನ್ನು ರೋಮಾಂಚನಗೊಳಿಸುತ್ತವೆ. ಈ ಎಲ್ಲ ಚಿತ್ರಣವನ್ನು ಹಿರಿಯ ಸಾಹಿತಿ ಜಯಂತ ಕಾಯ್ಕಿಣಿ ಅವರು ‘ಅಯ್ಯಾ ಉತ್ತರ ಕನ್ನಡಾ’ ಹಾಡಿನ ಮೂಲಕ ಸಾಕಾರಗೊಳಿಸಿದರೆ, ಯುವ ಇಂಡೀ ಗಾಯಕ ನಾರಾಯಣ ಶರ್ಮ ಈ ಹಾಡನ್ನು ಗಿಟಾರ್ ತಂತಿಯಲ್ಲಿ ಮೊಳಗಿಸುತ್ತಾ ಹಾಡಿದ್ದು ಕೇಳಿದರೆ ಮೈನವಿರೇಳುತ್ತದೆ.

‘ಉಯ್ಯಾಲೆ ಗೀತೆ’ ಆಲ್ಬಂನಲ್ಲಿರುವ ಈ ಇಂಡೀ ಗೀತೆಯ ಸಾಹಿತ್ಯ ಹೀಗಿದೆ...

**ಅಡಿಕೆ ತೆಂಗು ಅಪ್ಪೆ**
**ಮಿಡಿ ಗೊಜ್ಜು ತಂಬುಳಿ ಚೆಪ್ಪೆ**

ಹೊಂದಿದೆ. ತನ್ಮಯ್ ಈ ಹಾಡಿನ ಮೂಲಕವೇ ಯುವಮನಸ್ಸನ್ನು ಸೆಳೆದಿದ್ದಾರೆ, ಹುಚ್ಚು ಹಿಡಿಸಿದ್ದಾರೆ, ಜನಮಾನಸದಲ್ಲಿ ಇಂಥ ಹಾಡಿನ ಮೂಲಕ ಅಚ್ಚಳಿಯದ ಛಾಪು ಮೂಡಿಸಿ ಇನ್ನಷ್ಟು, ಮತ್ತಷ್ಟು ಇಂಥ ಮನಸ್ಸನ್ನು ತಿಳಿಗೊಳಿಸುವ ಹಾಡಿನ ನಿರೀಕ್ಷೆ ಮೂಡಿಸಿದ್ದಾರೆ.

‘ನಿನ್ನ ನೋಟವು’ ಹಾಡಿನ ಸಾಹಿತ್ಯ ಎಷ್ಟು ಲಾಲಿತ್ಯಪೂರ್ಣವಾಗಿದೆ ನೋಡಿ...

**ಕೆನೆಯ ಕೆಂಪಿನ ಗುಲಾಬಿ ಹೂವ**
**ಕೂದಲು ಹರಡಿದ ನಿನ್ನ ಮುಗವ**
**ಸುಂದರಿ ನಿನ್ನನೆ ನೋಡುವ ನೆಪವ**